ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 83-89
©*IIMRD*, Mysuru

IIMRD JOURNALS

www.iimrd.com

# ಕರ್ನಾಟಕದ ಬಯಲು ಬಂಡೆಗಲ್ಲು ಚಿತ್ರಕಲೆ: ಡಾ.ಅ.ಸುಂದರ ಅವರ ಶೋಧನೆಗಳು ಮತ್ತು ಸಾಂಸ್ಕೃತಿಕ ದೃಷ್ಟಿಕೋನ

**ಬಸವರಾಜ[1] ಮತ್ತು ಡಾ.ಎಸ್.ಜಿ ಚಲವಾದಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಮಾರ್ಗದರ್ಶಕರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

**ಸಾರಾಂಶ: (Abstract)**

*ಡಾ.ಅ.ಸುಂದರ ಅವರು ಕರ್ನಾಟಕದ ಪುರಾತತ್ವ ಮತ್ತು ಇತಿಹಾಸ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅತ್ಯಂತ ಮೌಲ್ಯಯುತವಾದುದು. ವಿಶೇಷವಾಗಿ ಬಯಲು ಬಂಡೆಗಲ್ಲು ಚಿತ್ರಕಲೆ (Rock Art) ಕುರಿತು ಅವರು ಮಾಡಿರುವ ಅಧ್ಯಯನವು ನಮ್ಮ ಸಾಂಸ್ಕೃತಿಕ ಪರಂಪರೆಯ ಅತಿ ಹಳೆಯ ಕುರುಹುಗಳಾಗಿವೆ. ಭಾರತದ ಪುರಾತತ್ವಶಾಸ್ತ್ರದ ಇತಿಹಾಸದಲ್ಲಿ ಬಂಡೆಗಲ್ಲು ಚಿತ್ರಕಲೆಯ ಅಧ್ಯಯನಕ್ಕೆ ಸುದೀರ್ಘ ಇತಿಹಾಸವಿದೆ. ಕರ್ನಾಟಕದ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಅತಿದೊಡ್ಡ ಕೊಡುಗೆ ನೀಡಿದವರಲ್ಲಿ ಡಾ. ಅ. ಸುಂದರ ಅವರು ಪ್ರಮುಖರು. ಅವರು 1960 ರಿಂದಲೂ ಸತತವಾಗಿ ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗಗಳಲ್ಲಿ ಕ್ಷೇತ್ರ ಕಾರ್ಯ ನಡೆಸಿ, ಹಲವಾರು ಹೊಸ ಚಿತ್ರಕಲೆ ತಾಣಗಳನ್ನು ಬೆಳಕಿಗೆ ತಂದಿದ್ದಾರೆ. ಅವರು ಉತ್ತರ ಕರ್ನಾಟಕದ ಸುಮಾರು 33 ಸ್ಥಳಗಳಲ್ಲಿ 74ಕ್ಕೂ ಹೆಚ್ಚು ಇಂತಹ ಚಿತ್ರಕಲಾ ಕೇಂದ್ರಗಳನ್ನು ಶೋಧಿಸಿ ವಿವರಿಸಿದ್ದಾರೆ. ಕರ್ನಾಟಕದ ಪ್ರಾಗಿತಿಹಾಸ ಮತ್ತು ಚಾರಿತ್ರಿಕ ಕಾಲದ ಬಯಲು ಬಂಡೆಗಲ್ಲು ಚಿತ್ರಕಲೆಯ ಕುರಿತು ಡಾ.ಅ.ಸುಂದರ ಅವರು ಮಾಡಿರುವ ಸಮಗ್ರ ಅಧ್ಯಯನವನ್ನು ಒಳಗೊಂಡಿದೆ. ಬಾದಾಮಿ, ಹಿರೆಬೆನಕಲ್, ಐಹೊಳೆ ಮತ್ತು ಮಲಪ್ರಭಾ ಬಯಲಿನಲ್ಲಿನ ಚಿತ್ರಗಳನ್ನು ವಿಶ್ಲೇಷಿಸುವ ಮೂಲಕ, ಈ ಕಲೆಯು ಹೇಗೆ ಜನಸಾಮಾನ್ಯರ ಸಾಂಪ್ರದಾಯಿಕ ನಂಬಿಕೆಗಳಿಂದ ಉನ್ನತ ಮಟ್ಟದ ಚಾರಿತ್ರಿಕ ಕಲೆಗೆ ಬುನಾದಿಯಾಯಿತು ಎಂಬುದನ್ನು ಇಲ್ಲಿ ವಿವರಿಸುವುದು ಈ ಲೇಖನದ ಉದ್ದೇಶವಾಗಿದೆ. ಈ ಲೇಖನವು ಬಂಡೆಗಲ್ಲು ಚಿತ್ರಗಳ ತಾಂತ್ರಿಕತೆ, ವಿಷಯವಸ್ತು, ಭೌಗೋಳಿಕ ಹಂಚಿಕೆ ಮತ್ತು ಅವುಗಳ ಹಿಂದೆ ಅಡಗಿರುವ ಮಾನವ ವಿಕಾಸದ ಹಂತಗಳನ್ನು ಡಾ.ಅ.ಸುಂದರ ಅವರ ನಿಲುವುಗಳ ಮೂಲಕ ಈ ಲೇಖನದದಲ್ಲಿ ಪ್ರತಿಪಾದಿಲಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಬಯಲು ಬಂಡೆಗಲ್ಲು ಚಿತ್ರಕಲೆ, ಡಾ.ಅ.ಸುಂದರ*

## ಪೀಠಿಕೆ

ಬಯಲು ಬಂಡೆಗಲ್ಲು ಚಿತ್ರಕಲೆ ಮಾನವ ನಾಗರಿಕತೆಯ ಆರಂಭಿಕ ಹಂತಗಳಲ್ಲಿ ಉಂಟಾದ ಅತ್ಯಂತ ಮಹತ್ವದ ದೃಶ್ಯ ಅಭಿವ್ಯಕ್ತಿಗಳಲ್ಲೊಂದು. ಇವು ಬರವಣಿಗೆ ಪ್ರಾರಂಭವಾಗುವ ಮೊದಲು ಮಾನವ

*Please cite this article as:* ಬಸವರಾಜ ಮತ್ತು ಎಸ್.ಜಿ ಚಲವಾದಿ. (2026). ಕರ್ನಾಟಕದ ಬಯಲು ಬಂಡೆಗಲ್ಲು ಚಿತ್ರಕಲೆ: ಡಾ.ಅ.ಸುಂದರ ಅವರ ಶೋಧನೆಗಳು ಮತ್ತು ಸಾಂಸ್ಕೃತಿಕ ದೃಷ್ಟಿಕೋನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 83–89

ಸಮಾಜದ ಜೀವನ ಶೈಲಿ, ಆರ್ಥಿಕ ಚಟುವಟಿಕೆಗಳು ಮತ್ತು ಧಾರ್ಮಿಕ ನಂಬಿಕೆಗಳನ್ನು ಪ್ರತಿಬಿಂಬಿಸುತ್ತವೆ. ಬಂಡೆಗಲ್ಲು ಚಿತ್ರಕಲೆಗಳನ್ನು ಕೇವಲ ಕಲೆಯಾಗಿ ಮಾತ್ರವಲ್ಲದೆ, ಇತಿಹಾಸದ ಮೂಲ ದಾಖಲೆಗಳಾಗಿವೆ ಎಂಬುವುದನ್ನು ವಿವರಿಸಲಾಗಿದೆ. ಕರ್ನಾಟಕದ ಪುರಾತತ್ವ ಇತಿಹಾಸದಲ್ಲಿ ವರ್ಣಚಿತ್ರಕಲೆಯು ಬಹಳ ಪ್ರಾಚೀನವಾದುದು. ಡಾ. ಅ.ಸುಂದರ ಅವರ ಪ್ರಕಾರ, ಮಹಾರಾಷ್ಟ್ರದ ಅಜಂತಾ ವರ್ಣಚಿತ್ರಗಳು ಮತ್ತು ಕರ್ನಾಟಕದ ಬಾದಾಮಿಯ ವರ್ಣಚಿತ್ರಗಳುಗಿಂತಲೂ ಮೊದಲೇ ಜನಸಾಮಾನ್ಯರ ಕಲೆಯಾಗಿ ಈ ಬಂಡೆಗಲ್ಲು ಚಿತ್ರಕಲೆ ಅಸ್ತಿತ್ವದಲ್ಲಿತ್ತು. ಈ ಕಲೆಯು ಕೇವಲ ಇತಿಹಾಸ ಕಾಲಕ್ಕೆ ಸೀಮಿತವಾಗದೆ ಪ್ರಾಗಿತಿಹಾಸದ ನೂತನ ಶಿಲಾಯುಗಕ್ಕಿಂತಲೂ(ಸು. ಕ್ರಿ.ಪೂ.2000–1000) ಹಿಂದಿನ ಕಾಲಮಾನಕ್ಕೆ ಹೋಲುತ್ತದೆ ಎಂಬುವುದನ್ನು ವಿಶೀಷ್ಟ ಕಲೆಯ ಆಗರ ಬಾದಾಮಿ ಎನ್ನುವ ಸಂಶೋಧನಾ ಲೇಖನಾದಲ್ಲಿ ವಿವರಿಸುತ್ತಾರೆ.

19ನೇ ಶತಮಾನದ ಅಂತ್ಯದಲ್ಲಿ ರಾಬರ್ಟ್ ಬ್ರೂಸ್‌ಫುಟ್ ಮತ್ತು ಇತರರು ಈ ಕುರಿತು ಪ್ರಾಥಮಿಕ ಮಾಹಿತಿಯನ್ನು ನೀಡಿದ್ದರೂ, ಡಾ.ಅ.ಸುಂದರ ಅವರು 1960ರ ದಶಕದಿಂದ ಸತತ ಅನ್ವೇಷಣೆ ನಡೆಸಿ ಇವುಗಳ ಮಹತ್ವವನ್ನು ಜಗತ್ತಿಗೆ ಸಾರಿದರು. ಇತಿಹಾಸ ಅಧ್ಯಯನದಲ್ಲಿ ಬಯಲು ಬಂಡೆಗಲ್ಲು ಚಿತ್ರಗಳು ಪ್ರಮುಖ ಸ್ಥಾನವನ್ನು ಹೊಂದಿವೆ. ಇವು ಲಿಪಿ ವ್ಯವಸ್ಥೆ ಹುಟ್ಟುವ ಮೊದಲು ಮಾನವರು ತಮ್ಮ ಜೀವನ ಮತ್ತು ಅನುಭವಗಳನ್ನು ವ್ಯಕ್ತಪಡಿಸಿದ ಮೊದಲ ಮಾಧ್ಯಮಗಳಾಗಿವೆ ಮತ್ತು ಆದಿ ಕಾಲದ ಮನುಷ್ಯ ಭಾವನೆಗಳನ್ನು ಹಂಚಿಕೊಳ್ಳಲು ಸನ್ನೆಗಳ ಮೂಲಕ ಪ್ರಾರಂಭಿಸಿದ ನಂತರ ತನಗೆ ಗೊತ್ತಿರುವ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಪ್ರಾರಂಭಿಸಿದ ನಂತರ ಭಾಷೆಯನ್ನು ಕಲಿತನು. ಹೀಗೆ ಬಂಡೆಗಲ್ಲು ಚಿತ್ರಕಲೆಯು ಬರೆದನು. ಪೂರ್ವಭಾವಿ ಅಧ್ಯಯನ ನೋಡುವುದಾದರೆ ಸುಂದರರವರು ಶೋಧನೆಗಳನ್ನು ಮಾಡುವ ಮುನ್ನ, ಅವರು ಈ ಹಿಂದೆ ಹೊಬರ್ಟ್ ನಾಕ್ಸ್, ಲಿಯನಾರ್ಡೋಮನ್, ಅಲ್ಚಿನ್ ಮತ್ತು ಡಾ. ವಾಕಣ್ಕರ್ ಮುಂತಾದವರು ಮಾಡಿದ್ದ ಶೋಧನೆಗಳ ಬಗ್ಗೆ ಅಧ್ಯಯನ ನಡೆಸಿದರು. ಇದು ಅವರ ಮುಂದಿನ ಸಂಶೋಧನೆಗೆ ಭದ್ರ ಬುನಾದಿ ಒದಗಿಸಿತು.

ಡಾ.ಅ.ಸುಂದರ ಅವರ "ಪ್ರಕಾರ ಬಂಡೆಗಲ್ಲು ಚಿತ್ರಗಳು ಕೇವಲ ಕಲಾತ್ಮಕ ಅಭಿವ್ಯಕ್ತಿಗಳಲ್ಲ. ಅವು ಮಾನವನ ದೈನಂದಿನ ಜೀವನ, ಆರ್ಥಿಕ ಚಟುವಟಿಕೆ, ಸಾಮಾಜಿಕ ಸಂಘಟನೆ ಮತ್ತು ಧಾರ್ಮಿಕ ನಂಬಿಕೆಗಳನ್ನು ಪ್ರತಿಬಿಂಬಿಸುವ ದೃಶ್ಯ ದಾಖಲೆಗಳಾಗಿವೆ"[3]. ಬೇಟೆ ದೃಶ್ಯಗಳು ಆರ್ಥಿಕ ಜೀವನವನ್ನು, ಗುಂಪು ಚಿತ್ರಗಳು ಸಾಮಾಜಿಕ ವ್ಯವಸ್ಥೆಯನ್ನು ಮತ್ತು ಚಿಹ್ನಾತ್ಮಕ ರೂಪಗಳು ಧಾರ್ಮಿಕ ನಂಬಿಕೆಗಳನ್ನು ಸೂಚಿಸುತ್ತವೆ. ಆದ್ದರಿಂದ ಇವುಗಳನ್ನು ಇತಿಹಾಸದ ಮೂಲವಸ್ತುಗಳಾಗಿ ಪರಿಗಣಿಸಬೇಕು ಎಂಬುದು ಅವರ ನಿಲುವಾಗಿದೆ.

**ಭೌಗೋಳಿಕ ಹಂಚಿಕೆ ಮತ್ತು ಸಂಶೋಧನಾ ವಲಯಗಳು**

ಡಾ.ಅ.ಸುಂದರ ಅವರು ಕರ್ನಾಟಕದ ಬಂಡೆ ಚಿತ್ರಕಲೆಯನ್ನು ಭೌಗೋಳಿಕವಾಗಿ ಮತ್ತು ಭೂ ವೈಜ್ಞಾನಿಕವಾಗಿ ಮೂರು ಪ್ರಮುಖ ಭಾಗಗಳಾಗಿ ವಿಂಗಡಿಸಿದ್ದಾರೆ.

1. **ಬಾದಾಮಿ–ಐಹೊಳೆ–ಕುಟುಕನಕೇರಿ ವಲಯ** (ಮರಳುಗಲ್ಲು ಪ್ರದೇಶ): ಇಲ್ಲಿ ಸಿಡಿಲಫಡಿ, ಸಿತಿದೋಣಿ ಮತ್ತು ಬಾದಾಮಿಯ ಉತ್ತರ ಬೆಟ್ಟಗಳಲ್ಲಿ ಅತಿ ಪ್ರಾಚೀನ ಚಿತ್ರಗಳು ದೊರೆತಿವೆ.[4]
2. **ಗ್ರಾನೈಟ್ (ಕಗ್ಗಲ್ಲು) ಪ್ರದೇಶ (ಪೂರ್ವ ಮತ್ತು ದಕ್ಷಿಣ ಭಾಗ)**: ಹಿರೆಬೆನಕಲ್, ಹಂಪಿ, ಕುರಗೋಡು ಮತ್ತು ಬಳ್ಳಾರಿ ಪ್ರದೇಶಗಳು ಇಲ್ಲಿ ಸೇರುತ್ತವೆ. ಇಲ್ಲಿನ ಕಲ್ಲಾಸರೆಗಳಲ್ಲಿ ನೂರಾರು ಚಿತ್ರಗಳಿವೆ[5].
3. **ಕರಾವಳಿ–ಘಟ್ಟ ಪ್ರದೇಶ ಮತ್ತು ಮಲೆನಾಡು ಭಾಗ**: ಇಲ್ಲಿ ಗವಿಗಳ ಕೊರತೆಯಿಂದಾಗಿ ಬಯಲು ಬಂಡೆಗಳ ಮೇಲೆ ಕೆತ್ತನೆ (Engraving) ರೂಪದ ಚಿತ್ರಗಳು ಪತ್ತೆಯಾಗಿವೆ ಉದಾ: ಕರಾವಳಿಯ ಕುಂದಾಪುರದ ಗೋಳಿ (ಉಡುಪಿ ಜಿಲ್ಲೆ) ಮತ್ತು ಅಂಕೋಲಾದ ಬೋಲೆ ಪ್ರದೇಶಗಳಲ್ಲಿ ಬಯಲು ಬಂಡೆಗಳ ಮೇಲೆ ಕೆತ್ತಲಾದ ಚಿತ್ರಗಳನ್ನು ಅವರು ದಾಖಲಿಸಿದ್ದಾರೆ. ಸಿರಸಿ ತಾಲೂಕಿನ ಸೊಂಡಾದಲ್ಲಿ ಮೂರು ಎತ್ತುಗಳ ಸಾಲಿನ ಕೆತ್ತನೆಯನ್ನು ಅವರು ಪತ್ತೆಹಚ್ಚಿದ್ದಾರೆ[6].

**ವಿಷಯ ವಸ್ತು ಮತ್ತು ಚಿತ್ರಣ ವಿಧಾನ**

ಈ ಚಿತ್ರಗಳ ಶೈಲಿ ಮತ್ತು ಅವುಗಳನ್ನು ಬಿಡಿಸಲು ಬಳಸಿದ ತಂತ್ರಜ್ಞಾನದ ಬಗ್ಗೆ ಡಾ. ಸುಂದರ ಅವರು ವಿಶಿಷ್ಟ ವಿಶ್ಲೇಷಣೆ ನೀಡಿದ್ದಾರೆ:

**ಬಣ್ಣಗಳ ಬಳಕೆ:** ಚಿತ್ರಗಳನ್ನು ಹೆಚ್ಚಾಗಿ ಕೆಮ್ಮಣ್ಣು(Red Ochre), ಬಿಳಿ ಮಣ್ಣು, ಅಥವಾ ಕರಿ ಕಪ್ಪಿನಿಂದ ಬಿಡಿಸಲಾಗಿದೆ. ತಜ್ಞರ ಪ್ರಕಾರ, ಕೆಮ್ಮಣ್ಣಿನ ಪುಡಿ, ಪ್ರಾಣಿಗಳ ರಕ್ತ, ಮೊಟ್ಟೆಯ ಬಿಳಿ ತಿರುಳು ಮತ್ತು ಎಲುಬಿನ ಪುಡಿಗಳನ್ನು ಬೆರೆಸಿ ಈ ಬಣ್ಣಗಳನ್ನು ತಯಾರಿಸುತ್ತಿದ್ದರು

**ಚಿತ್ರದ ವಸ್ತು:** ಬೇಟೆಯಾಡುವುದು, ಸಮೂಹ ನೃತ್ಯ (ಕೈ ಕೈಹಿಡಿದು ಕುಣಿಯುವ ಮನುಷ್ಯರು), ಸಾಂಕೇತಿಕ ಮನುಷ್ಯಾಕೃತಿಗಳು, ಕುದುರೆ ಸವಾರರು ಹಾಗೂ ಪ್ರಾಣಿಗಳಾದ ಗೂಳಿ, ಕಾಡೆಮ್ಮೆ, ಚಿಗರಿ, ಆನೆ ಮತ್ತು ಪಕ್ಷಿಗಳು ಪ್ರಮುಖ ವಿಷಯಗಳಾಗಿವೆ.

**ಚಿತ್ರಣ ವಿಧಾನ:** ಚಿತ್ರಗಳನ್ನು ಮೂರು ವಿಧವಾಗಿ ಗುರುತಿಸಬಹುದು:

1. ಬಣ್ಣದ ಚಿತ್ರಗಳು(Painting): ಗವಿಗಳಲ್ಲಿ ನೇರವಾಗಿ ಬಣ್ಣದಿಂದ ಬಿಡಿಸಿದವು
2. ಕುಟ್ಟು ಚಿತ್ರಗಳು(Bruising): ಕಲ್ಲಿನಿಂದ ಬಂಡೆಯ ಮೇಲೆ ಹೊಡೆದು ಮೂಡಿಸಿದ ಆಕೃತಿಗಳು.
3. ಕೆತ್ತನೆ ಚಿತ್ರಗಳು(Engraving): ಚೂಪಾದ ಆಯುಧದಿಂದ ಕೊರೆದು ಮಾಡಿದ ಚಿತ್ರಗಳು

**ಬಯಲು** ಬಂಡೆ ಚಿತ್ರಕಲೆಯ ಕುರಿತು ಡಾ.ಸುಂದರ ಅವರು ಕೆಲವು ಮಹತ್ವದ ಮತ್ತು ವೈಜ್ಞಾನಿಕ ನಿಲುವುಗಳನ್ನು ಮಂಡಿಸಿದ್ದಾರೆ, ಭಾಷೆಯ ಮುಖ್ಯ ಕೆಲಸ ಯಾವಾಗಲೂ ಮಾಹಿತಿ ಹಂಚುವುದು, ಕಥೆ ಹೇಳುವುದು ಮತ್ತು ನಂಬಿಕೆಗಳನ್ನು ವ್ಯಕ್ತಪಡಿಸುವುದಾಗಿದೆ. ಪೂರ್ವ ಇತಿಹಾಸದಲ್ಲಿ ಲಿಪಿ ಮತ್ತು ಬರವಣಿಗೆ ಇಲ್ಲದ ಕಾರಣ, ಮಾನವರು ತಮ್ಮ ಜೀವನವನ್ನು ವ್ಯಕ್ತಪಡಿಸಲು ಚಿತ್ರಗಳನ್ನು ಬಳಸಿದರು. ಬಂಡೆಗಲ್ಲು ಚಿತ್ರಗಳಲ್ಲಿ ಕಾಣುವ ಪ್ರಾಣಿ ರೂಪಗಳು ಪರಿಸರವನ್ನು, ಬೇಟೆ ದೃಶ್ಯಗಳು ಜೀವನೋಪಾಯವನ್ನು ಮತ್ತು ಚಿಹ್ನಾತ್ಮಕ ರೂಪಗಳು ಧಾರ್ಮಿಕ ನಂಬಿಕೆಗಳನ್ನು ಸೂಚಿಸುತ್ತವೆ. ಆದ್ದರಿಂದ ಈ ಚಿತ್ರಗಳು ಭಾಷೆಯಂತೆ ಕಾರ್ಯನಿರ್ವಹಿಸುತ್ತವೆ. ಹೀಗಾಗಿ ಬಂಡೆಗಲ್ಲು ಚಿತ್ರಗಳನ್ನು "ಸಂಸ್ಕೃತಿಯ ಭಾಷೆ"[7] ಎಂದು ವರ್ಣಿಸಿದ್ದಾರೆ.

ಡಾ.ಅ.ಸುಂದರ ಅವರ ಕ್ಷೇತ್ರಕಾರ್ಯ ಮತ್ತು ನಿರಂತರ ಅನ್ವೇಷಣೆ ಗಮನಿಸುವುದಾದರೆ, ಸಂಶೋಧಕರು ಕೇವಲ ಗ್ರಂಥಾಲಯಕ್ಕೆ ಸೀಮಿತವಾಗದೆ, ಎಣಿಸಲಸದಳವಾದ ಬೃಹತ್ ಬಂಡೆಗಳ ರಾಶಿಗಳಿಂದ ಕೂಡಿದ ಎತ್ತರ ಬೆಟ್ಟದ ಸಾಲುಗಳಲ್ಲಿ ಖುದ್ದಾಗಿ ತಿರುಗಾಡಿ ಕಲ್ಲಾಸರೆಗಳನ್ನು ಹುಡುಕಿದ್ದಾರೆ. ದಾರಿ ತಪ್ಪುವಂತಹ ದುರ್ಗಮವಾದ ಕಾಡು ಮತ್ತು ಗುಡ್ಡಗಳಲ್ಲಿ ಅವರು ಸ್ವತಃ ಅನ್ವೇಷಣೆ ನಡೆಸಿದ್ದಾರೆ. 1961–62ರಿಂದ ಹಿಡಿದು 1975ರ ನಂತರವೂ ವಿಶ್ವವಿದ್ಯಾಲಯ ಅನುದಾನ ಆಯೋಗದ (UGC) ಸಹಾಯದೊಂದಿಗೆ ತಮ್ಮ ಕ್ಷೇತ್ರಕಾರ್ಯವನ್ನು ಮುಂದುವರಿಸಿದರು.

**ಅ) ಜೀವನೋಪಾಯದ ನಂಬಿಕೆಗಳು ಮತ್ತು ಮಾಂತ್ರಿಕ ವಿಧಾನ:** ಈ ಚಿತ್ರಗಳು ಕೇವಲ ಬಿಡುವಿನ ವೇಳೆಯ ಗೀಚುಗಳಲ್ಲ. ಪ್ರಾಗಿತಿಹಾಸ ಕಾಲದ ಮಾನವನು ಆಹಾರಕ್ಕಾಗಿ ಬೇಟೆಯಾಡುವ ಪ್ರಾಣಿಗಳ ವಂಶಾಭಿವೃದ್ಧಿ ಮತ್ತು ಯಶಸ್ವಿ ಬೇಟೆಗಾಗಿ ಮಾಂತ್ರಿಕ ವಿಧಾನದ ನಂಬಿಕೆಯಿಂದ ಇವುಗಳನ್ನು ಬಿಡಿಸುತ್ತಿದ್ದನು ಉದಾಹರಣೆಗೆ, ”ಗರ್ಭಧರಿಸಿದ ಚಿಗರಿ ಅಥವಾ ಜಿಂಕೆಯ ಚಿತ್ರಗಳು ಸಮೃದ್ಧಿಯ ಸಂಕೇತವಾಗಿವ”[8]. ಬಂಡೆಗಲ್ಲು ಚಿತ್ರಗಳು ಮಾನವನ ಜೀವನದ ಪ್ರತಿಬಿಂಬವಾಗಿವೆ. ಉದಾಹರಣೆಗೆ, ಚಿತ್ರಗಳಲ್ಲಿ ಕಾಣುವ ಪ್ರಾಣಿ ರೂಪಗಳು ಅವರ ಸುತ್ತಲಿನ ಪರಿಸರ ಮತ್ತು ಆಹಾರ ಅವಲಂಬನೆಯನ್ನು ಸೂಚಿಸುತ್ತವೆ. ಹಾಗೆಯೇ ಬೇಟೆ ದೃಶ್ಯಗಳು ಅವರ ಆರ್ಥಿಕ ಚಟುವಟಿಕೆ ಮತ್ತು ಜೀವನೋಪಾಯವನ್ನು ತೋರಿಸುತ್ತವೆ. ಇವುಗಳಿಂದ ಮಾನವನ ದೈನಂದಿನ ಜೀವನ, ಉದ್ಯೋಗ ಮತ್ತು ಪರಿಸರದೊಂದಿಗೆ ಇರುವ ಸಂಬಂಧವನ್ನು ತಿಳಿಯಬಹುದು. ಆದ್ದರಿಂದ ಬಂಡೆಗಲ್ಲು ಚಿತ್ರಗಳು ಮಾನವನ ಜೀವನದ ಪ್ರತಿಬಿಂಬವಾಗಿವೆ.

**ಆ) ಕಲಾವಂತಿಕೆ ಮತ್ತು ನೈಜತೆ:** ಇವುಗಳು ತರಬೇತಿ ಪಡೆದ ಚಿತ್ರಕಾರರಿಂದಾದವುಗಳಲ್ಲ, ಜನಸಾಮಾನ್ಯರಿಂದ ರಚಿತವಾದವುಗಳು. ಆದರೂ ಇವುಗಳಲ್ಲಿ ಭಾವಗರ್ಭಿತ ರೇಖಾ ವಿನ್ಯಾಸ ಮತ್ತು ಪ್ರಮಾಣಬದ್ಧತೆ (Proportion) ಕಂಡುಬರುತ್ತದೆ ಪ್ರಾಗಿತಿಹಾಸದ ಚಿತ್ರಗಳಲ್ಲಿ ನೈಜತೆ ಹೆಚ್ಚಿದ್ದರೆ, ಇತಿಹಾಸ ಕಾಲದ ಚಿತ್ರಗಳಲ್ಲಿ ರೂಢಿಬದ್ಧ ಸಾಂಕೇತಿಕತೆ ಹೆಚ್ಚಾಗಿದೆ.

**ಇ) ಸಾಂಸ್ಕೃತಿಕ ನಿರಂತರತೆ:** ಬಂಡೆಗಲ್ಲು ಚಿತ್ರಕಲೆಯು ಪ್ರಾಗಿತಿಹಾಸ ಕಾಲದಿಂದ ಚಾರಿತ್ರಿಕ ಕಾಲದವರೆಗೂ ನಿರಂತರವಾಗಿ ಬೆಳೆದು ಬಂದಿದ. “ಬಾದಾಮಿಯ ಕೆಲವು ಚಿತ್ರಗಳು ಮತ್ತು ಹಿರೇಬೆನಕಲ್ಲಿನ ಕುದುರೆ ಸವಾರರ ಚಿತ್ರಗಳು ಆಯಾ ಕಾಲದ ಸಂಸ್ಕೃತಿಗಳಾದ ನೂತನ ಶಿಲಾಯುಗ ಮತ್ತು ಬೃಹತ್ ಶಿಲಾ ಸಂಸ್ಕೃತಿಯ ಜನರ ಜೀವನವನ್ನು ಪ್ರತಿಬಿಂಬಿಸುತ್ತವೆ”[9]. ಬಂಡೆಗಲ್ಲು ಚಿತ್ರಗಳನ್ನು “ಸಂಸ್ಕೃತಿಯ ಭಾಷೆ” ಎಂದು ಕರೆಯುವುದಕ್ಕೆ ಕಾರಣ, ಇವು ಮಾನವನ ಜೀವನದ ವಿವಿಧ ಅಂಶಗಳನ್ನು ವ್ಯಕ್ತಪಡಿಸುತ್ತವೆ. ಪ್ರಾಣಿ ಚಿತ್ರಗಳು ಪರಿಸರ ಮತ್ತು ಆಹಾರ ವ್ಯವಸ್ಥೆಯನ್ನು, ಬೇಟೆ ದೃಶ್ಯಗಳು ಸಾಮಾಜಿಕ ಸಹಕಾರವನ್ನು ಮತ್ತು ಚಿಹ್ನಾತ್ಮಕ ರೂಪಗಳು ಧಾರ್ಮಿಕ ನಂಬಿಕೆಗಳನ್ನು ಸೂಚಿಸುತ್ತವೆ. ಬರವಣಿಗೆ ವ್ಯವಸ್ಥೆ ಇಲ್ಲದ ಕಾಲದಲ್ಲಿ ಈ ಚಿತ್ರಗಳೇ ಮಾಹಿತಿ ಹಂಚುವ ಮಾಧ್ಯಮವಾಗಿದ್ದವು. ಆದ್ದರಿಂದ ಬಂಡೆಗಲ್ಲು ಚಿತ್ರಗಳು ಮಾನವನ ಸಂಸ್ಕೃತಿಯ ಭಾಷೆಯಾಗಿ ಕಾರ್ಯನಿರ್ವಹಿಸುತ್ತವೆ.

ಸಾಂಸ್ಕೃತಿಕ ಮತ್ತು ಪರಿಸರ ವಿಶ್ಲೇಷಣೆ (Contextual Analysis): ಚಿತ್ರಗಳನ್ನು ಕೇವಲ ಕಲೆಯಾಗಿ ನೋಡದೆ, ಆ ಗವಿಗಳ ಸುತ್ತಮುತ್ತಲಿನ ಪರಿಸರ ಮತ್ತು ಪುರಾತತ್ವ ಕುರುಹುಗಳೊಂದಿಗೆ ಅವರು ತಳಕು ಹಾಕಿದ್ದಾರೆ. ಉದಾಹರಣೆಗೆ, ಹಿರೆಬೆನಕಲ್ಲಿನ ಚಿತ್ರಗಳ ಸಮೀಪದಲ್ಲಿ ಬೃಹತ್ ಶಿಲಾಸಂಸ್ಕೃತಿಯ ಜನರ ವಾಸ್ತವ್ಯದ ಕುರುಹುಗಳು, ಸುಟ್ಟ ಮಣ್ಣಿನ ಮಣಿಗಳು ಮತ್ತು ಮೃತ್ಪಾತ್ರೆಗಳ ಅವಶೇಷಗಳು ಇರುವುದನ್ನು ಅವರು ಪತ್ತೆಹಚ್ಚಿ, ಆ ಮೂಲಕ ಚಿತ್ರಗಳ ಕಾಲಮಾನವನ್ನು ನಿರ್ಧರಿಸಿದ್ದಾರೆ. ಆ ಪ್ರದೇಶದಲ್ಲಿದ್ದ ಹುಲಿ, ಚಿರತೆ, ಗೂಳಿ ಮುಂತಾದ ಪ್ರಾಣಿಗಳ ನೈಸರ್ಗಿಕ ಪರಿಸರಕ್ಕೂ ಚಿತ್ರಗಳಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಿದ್ದಾರೆ.

**ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ:** ಅವರ ಸಂಶೋಧನೆಯ ವಿಶೇಷವೆಂದರೆ, ಅವರು ಬಂಡೆಗಲ್ಲು ಚಿತ್ರಗಳನ್ನು ಕೇವಲ ಕಲೆಯಾಗಿ ನೋಡದೆ ಅವುಗಳನ್ನು ಪ್ರಾಚೀನ ಸಾಹಿತ್ಯ ಮತ್ತು ಧಾರ್ಮಿಕ ಆಚರಣೆಗಳೊಂದಿಗೆ ಸಮೀಕರಿಸಿದ್ದಾರೆ. "ವೃಷೋತ್ಸರ್ಗ ಸಂಸ್ಕಾರ: ಎತ್ತುಗಳ ಕಾಲುಗಳಿಗೆ ಜ್ಯಾಮಿತೀಯ ವಿನ್ಯಾಸಗಳನ್ನು ಕಟ್ಟಿರುವ ಚಿತ್ರಗಳನ್ನು ಅವರು 'ಧರ್ಮಶಾಸ್ತ್ರ'ಗಳಲ್ಲಿ ಉಲ್ಲೇಖಿಸಿರುವ 'ವೃಷೋತ್ಸರ್ಗ' ವಿಧಿಯೊಂದಿಗೆ ಹೋಲಿಸಿದ್ದಾರೆ"[10]. "ಜ್ಯಾಮಿತೀಯ ವಿನ್ಯಾಸಗಳು: ಹಿರೇಬೆಣಕಲ್ ಮತ್ತು ಚಿಕ್ಕರಾಂಪುರದಲ್ಲಿ ಕಂಡುಬರುವ ನಾಲ್ಕು ಗಂಟುಗಳ ವಿನ್ಯಾಸವು (Endless four-knot design) ಹರಪ್ಪ ಸಂಸ್ಕೃತಿಯಿಂದ ಬಂದಿರಬಹುದು ಎಂದು ಅವರು ಊಹಿಸಿದ್ದಾರೆ"[11].

**ಪ್ರಮುಖ ಸ್ಥಳಗಳ ವಿಶೇಷ ಅಧ್ಯಯನ**

1. **ಹಿರೆಬೆನಕಲ್ಲಿನ 12ನೇ ಗವಿ:** ಇಲ್ಲಿನ ಕುದುರೆ ಸವಾರರ ಲಗಾಮು ಹಿಡಿದಿರುವ ರೀತಿ ಅತ್ಯಂತ ವಿಶಿಷ್ಟವಾಗಿದೆ. ಲಗಾಮು ತಲೆಯ ಮೇಲಿನಿಂದ ಹೋಗಿ ಸವಾರನ ಕೈಯಲ್ಲಿದೆ. ಇದು ಸ್ವೀಡನ್‌ನ ಕಂಚಿನ ಯುಗದ ಚಿತ್ರಗಳಿಗೆ ಹೋಲಿಕೆಯಾಗುವುದರಿಂದ ಈ ಕಲೆಯ ಪ್ರಾಚೀನತೆಯನ್ನು ಡಾ. ಸುಂದರ ಅವರು ಎತ್ತಿ ತೋರಿಸಿದ್ದಾರೆ.

2. **ಬಾದಾಮಿಯ ಸಿದ್ಧಪಡಿಸಿದ ತಳಹದಿಯ ಚಿತ್ರಗಳು:** ಉತ್ತರ ಬೆಟ್ಟದ ಕಲ್ಲಾಸರೆಯಲ್ಲಿರುವ ಚಿತ್ರಗಳು ಉಳಿದೆಲ್ಲ ಚಿತ್ರಗಳಿಗಿಂತ ಭಿನ್ನವಾಗಿವೆ. ಇಲ್ಲಿ ಬಂಡೆಯ ಮೇಲೆ ಹಳದಿ ಮಿಶ್ರಿತ ಸುಣ್ಣದ ಲೇಪನ ಮಾಡಿ ಅದರ ಮೇಲೆ ಕೆಂಪು ರೇಖೆಗಳಿಂದ ಗಣ್ಯ ವ್ಯಕ್ತಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದ ಪ್ರಬುದ್ಧ ಕಲೆಯನ್ನು ಪ್ರತಿನಿಧಿಸುತ್ತದೆ.

**ತುಲನಾತ್ಮಕ ಅಧ್ಯಯನ (Comparative Analysis)**

ತಾವು ಶೋಧಿಸಿದ ಚಿತ್ರಗಳ ಕಾಲಮಾನ ಮತ್ತು ಶೈಲಿಯನ್ನು ನಿರ್ಧರಿಸಲು ಅವರು ದೇಶ–ವಿದೇಶಗಳ ಇತರ ಕಲಾಕೃತಿಗಳೊಂದಿಗೆ ಹೋಲಿಕೆ ಮಾಡಿದ್ದಾರೆ. ಉದಾಹರಣೆಗೆ, ಹಿರೆಬೆನಕಲ್ಲಿನ ಕುದುರೆ ಲಗಾಮಿನ ಚಿತ್ರವನ್ನು ದಕ್ಷಿಣ ಸ್ವೀಡನ್ನಿನ ಕಂಚಿನ ಯುಗದ ಕಲ್ಲೋರಿಯ ಚಿತ್ರಕ್ಕೆ ಹೋಲಿಸಿದ್ದಾರೆ. ಹಾಗೆಯೇ, ಬೈಲ್ ಮರ್ಚೆಡಿನ ಕುದುರೆ ಸವಾರರ ಕಾದಾಟದ ಚಿತ್ರಗಳನ್ನು 14–16ನೇ ಶತಮಾನದ ವಿಜಯನಗರ ಶೈಲಿಯ ಶಿಲ್ಪಗಳಿಗೆ ಹೋಲಿಸಿ ವಿಶ್ಲೇಷಿಸಿದ್ದಾರೆ.

**ಮುಖ್ಯ ಫಲಿತಾಂಶಗಳೆಂದರೆ:**

**ಕಲೆಯ ಬುನಾದಿ:** ಅಜಂತಾ ಅಥವಾ ಬಾದಾಮಿ ಗುಹೆಗಳ ಉನ್ನತ ಮಟ್ಟದ ಭಿತ್ತಿಚಿತ್ರಗಳಿಗೆ ಪ್ರಾಗಿತಿಹಾಸದ ಈ ಬಂಡೆ ಚಿತ್ರಗಳೇ ಬುನಾದಿ ಹಾಕಿವೆ.

**ತಾಂತ್ರಿಕ ವಿಕಾಸ:** ಕಾಲಕ್ರಮೇಣ ಬಂಡೆಯ ಮೇಲೆ ಸುಣ್ಣದ ಲೇಪನ ಮಾಡುವ ಪದ್ಧತಿಯು ಚಿತ್ರಗಳನ್ನು ಹೆಚ್ಚು ಸ್ಪಷ್ಟಗೊಳಿಸಲು ಸಹಾಯ ಮಾಡಿತು.

**ಧಾರ್ಮಿಕ ಪದ್ಧತಿ:** **"**ಇಂದಿಗೂ ಹಳ್ಳಿಗಳಲ್ಲಿ ಹಬ್ಬಗಳ ಸಂದರ್ಭದಲ್ಲಿ ಬಂಡೆಗಳ ಮೇಲೆ ಚಿತ್ರ ಬಿಡಿಸುವ ಸಂಪ್ರದಾಯ ಉಳಿದುಬಂದಿರುವುದು ಈ ಕಲೆಯ ನಿರಂತರತೆಗೆ ಸಾಕ್ಷಿಯಾಗಿದೆ (ಉದಾ: ಮುಳಗುಂದ)**"**[12].

ಕರ್ನಾಟಕದ ಬಯಲು ಬಂಡೆಗಲ್ಲು ಚಿತ್ರಕಲೆಯು ನಮ್ಮ ಇತಿಹಾಸದ ಅಮೂಲ್ಯ ದಾಖಲೆಗಳು. ಡಾ. ಅ. ಸುಂದರ ಅವರ ಸಂಶೋಧನೆಯು ಈ ಕಲೆಯು ಕೇವಲ ಪ್ರಾಚೀನ ಮಾನವನ ಕೃತಿಯಲ್ಲ, ಬದಲಿಗೆ ಅದು ಮಾನವ ಸಂಸ್ಕೃತಿಯ ವಿಕಾಸದ ಹಂತಗಳು ಎಂಬುದನ್ನು ಸಾಬೀತುಪಡಿಸಿದೆ. ಇಂದು ಕಲ್ಲು ಗಣಿಗಾರಿಕೆಯಿಂದ ಇವುಗಳು ನಾಶವಾಗುತ್ತಿದ್ದು, ಇವುಗಳನ್ನು ರಕ್ಷಿಸುವುದು ಅತ್ಯಗತ್ಯವಾಗಿದೆ ಎಂದು ಅವರು ಎಚ್ಚರಿಸಿದ್ದಾರೆ. ಕರ್ನಾಟಕದ ಬಯಲು ಬಂಡೆಗಲ್ಲು ಚಿತ್ರಗಳು ಮಾನವ ಇತಿಹಾಸದ ಅಮೂಲ್ಯ ಸಂಪತ್ತಾಗಿದೆ. ಡಾ. ಅ. ಸುಂದರ ಅವರ ಅಧ್ಯಯನವು ಇವುಗಳ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಈ ಚಿತ್ರಗಳು ಆರ್ಥಿಕ ಜೀವನ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆ ಎಲ್ಲವನ್ನೂ ಪ್ರತಿಬಿಂಬಿಸುತ್ತವೆ. ಆದ್ದರಿಂದ ಇವುಗಳನ್ನು ಕೇವಲ ಕಲೆಯಾಗಿ ನೋಡದೇ, ಇತಿಹಾಸದ ಮೂಲವಸ್ತುವಾಗಿ ಅಧ್ಯಯನ ಮಾಡಬೇಕು.

**ಕೊನೆ ಟಿಪ್ಪಣಿಗಳು**


1. ಸುಂದರ, ಅ. (1982). *ವಿಶಿಷ್ಟ ವರ್ಣಚಿತ್ರಕಲೆಯ ಆಗರ : ಬಾದಾಮಿ. ಚಾಲುಕ್ಯ ಶ್ರೀ* (ಬೆಳ್ಳಿಹಬ್ಬದ ಪ್ರಕಟಣೆ). (ಪುಟಗಳು 929–940).ಬಾದಾಮಿ: ಶ್ರೀ ವೀರ ಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ.
2. ಸುಂದರ, ಅ. (1982). *ಉತ್ತರಕರ್ನಾಟಕದಲ್ಲಿ ಬಂಡೆಗಲ್ಲಿನ ವರ್ಣಚಿತ್ರಗಳು. ಬೆಳ್ವೊಲ* (ಡಾ. ಆರ್. ಸಿ. ಹಿರೇಮಠ ಅವರ ಅಭಿನಂದನ ಗ್ರಂಥ). (ಪುಟಗಳು 258–274). ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
3. ಸುಂದರ, ಅ. (1994). *ಕರ್ನಾಟಕ: ಪ್ರಾಗಿತಿಹಾಸ ಕಾಲದ ಕಲೆ.* ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ.
4. ಸುಂದರ, ಅ. (1987). *ಸಮ್ ನೋಟವರ್ದಿ ರಾಕ್ ಪೈಂಟಿಂಗ್ಸ್ ಇನ್ ಚಿಕ್ಕ–ರಾಮಪುರ.* ಜರ್ನಲ್ ಆಫ್ ಕರ್ನಾಟಕ ಯೂನಿವರ್ಸಿಟಿ (ಸೋಷಿಯಲ್ ಸೈನ್ಸ್), XXI, 184-205.
5. Sundara, A. (1984). *Some Select Rock-Paintings from North Karnataka.* In K. K. Chakravarty (Ed.), *Rock-Art of India: Paintings and Engravings.* (pp. 137–148). New Delhi: Arnold-Heinemann.

6. Sundara, A. (2017*). Rock Art in Karnataka.* In S. Pradhan & D. B. Garnayak (Eds.), Rock Art in India (Vol. 1, pp. 187–202). Delhi: B.R. Publishing Corporation.
7. Sundara, A. (1974). *Further Notices of Rock Paintings in Hire Benakal*. Journal of Indian History, III(1), 21-32.
8. Panchamukhi, R. S. (1945). *Annual Report on Kannada Research in Bombay Province (1939-40).* Dharwad: Kannada Research Institute.
9. Wakankar, V. S., & Brooks, R. R. (1976). *Stone Age Paintings in India.* Mumbai: D.P. Taraporevala Sons & Co.
10. Sundara. A., *Rock Cut Art In Karnataka.* In felicitation of Prof V H Sonawane, Sadasiba Pradhan, Dibishad B garnayak(Edit), B R Publishing Corporation, Dehli
11. ಸುಂದರ, ಅ. (1987). *ಸಮ್ ನೋಟವರ್ದಿ ರಾಕ್ ಪೈಂಟಿಂಗ್ಸ್ ಇನ್ ಚಿಕ್ಕ–ರಾಮಪುರ.* ಜರ್ನಲ್ ಆಫ್ ಕರ್ನಾಟಕ ಯೂನಿವರ್ಸಿಟಿ (ಸೋಷಿಯಲ್ ಸೈನ್ಸ್), XXI, 184-205
12. Sundara, A. (2017*). Rock Art in Karnataka.* In S. Pradhan & D. B. Garnayak (Eds.), Rock Art in India (Vol. 1, pp. 187–202). Delhi: B.R. Publishing Corporation.